ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/02/ADM10/EST9/2025

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 18-01-2025

## ಸುತ್ತೋಲೆ

ವಿಷಯ: ರಾಜ್ಯದ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿ Aadhar Enabled Biometric Attendance System ಹಾಜರಾತಿ ನಿರ್ವಹಣೆಗೆ ಸಂಬಂಧಿಸಿದಂತೆ

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 33 ವಿವಿಧ 2023 ದಿ:04-08-2023
2. ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿ:25-06-2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿ Aadhar Enabled Biometric Attendance System ಯಂತ್ರದಲ್ಲಿ ಹಾಜರಾತಿಯನ್ನು ನಮೂದಿಸುವಂತೆ ಸೂಚಿಸಲಾಗಿತ್ತು. ಆದರೇ ಕೆಲವೊಂದು ಸಂಸ್ಥೆಗಳ AEBAS ಹಾಜರಾತಿ ಪರಿಶೀಲಿಸಲಾಗಿ ಹಲವಾರು ಸಂಸ್ಥೆಗಳಲ್ಲಿ ಅಧಿಕಾರಿ/ಸಿಬ್ಬಂದಿಗಳು ಸದರಿಯವರುಗಳಿಗೆ ನಿಯಮಾನುಸಾರ ನಿಗಧಿಪಡಿಸಿದ ಅವಧಿಗಳಲ್ಲಿ (In-time/Out-time) ಹಾಜರಾತಿ ದಾಖಲಿಸದಿರುವುದನ್ನು ಹಾಗೂ ಎರಡು ಅವಧಿಯ ಬದಲಿಗೆ ಕೇವಲ ಒಂದು ಅವಧಿಗೆ ಮಾತ್ರ ಹಾಜರಾತಿ ದಾಖಲಿಸಿರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಆದ್ದರಿಂದ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು (ಪ್ರಾಚಾರ್ಯರು ಹಾಗೂ ನಿಯೋಜಿತ ಸಿಬ್ಬಂದಿಗಳನ್ನೊಳಗೊಂಡಂತೆ) ಕೆ ಸಿ ಎಸ್ ನಿಯಮಾನುಸಾರ ತಮಗೆ ನಿಗಧಿಪಡಿಸಿದ ಕೆಲಸದ ವೇಳೆಗೆ ಸರಿಯಾಗಿ ಹಾಜರಾತಿಯನ್ನು ಕಡ್ಡಾಯವಾಗಿ AEBAS ನಲ್ಲಿ ನಮೂದಿಸಲು ಸೂಚಿಸಲಾಗಿದೆ. ಈ ಸಂಬಂಧ ಸಂಸ್ಥೆಯ ಪ್ರಾಚಾರ್ಯರು ನಿಗಾವಹಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ, ಒಂದು ವೇಳೆ ನಿಗದಿತ ಅವಧಿಗಿಂತ ಕಡಿಮೆ ಕೆಲಸದ ಅವಧಿ ಕಂಡುಬಂದಲ್ಲಿ ಸದರಿ ಅಧಿಕಾರಿ/ಸಿಬ್ಬಂದಿಗಳು ಹಾಗೂ ಸಂಸ್ಥೆಯ ಪ್ರಾಚಾರ್ಯರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಯಾವುದೇ ಅಧಿಕಾರಿ/ ಸಿಬ್ಬಂದಿಗಳು ವರ್ಗಾವಣೆ ಹೊಂದಿದಲ್ಲಿ ಸದರಿಯವರ ಹಾಜರಾತಿ ಮಾಹಿತಿಯನ್ನು ಸಂಸ್ಥೆಯಲ್ಲಿ ಉಳಿಸಿಕೊಳ್ಳಲು (save ಮಾಡಿಕೊಳ್ಳಲು) ತಿಳಿಸಲಾಗಿದೆ. ಈಗಾಗಲೇ ಉಲ್ಲೇಖ(2) ರಲ್ಲಿ ಸೂಚಿಸಿರುವಂತೆ ಪ್ರತಿ ಮಾಹೆಯ ವೇತನವನ್ನು **ಕಡ್ಡಾಯವಾಗಿ** ಬಯೋಮೆಟ್ರಿಕ್ ಯಂತ್ರದ ಹಾಜರಾತಿಯನ್ನಾಧರಿಸಿ ಖಜಾನೆಯಿಂದ ಸೆಳೆಯಲು ಸೂಚಿಸಲಾಗಿದೆ ಹಾಗೂ ಈ ಸಂಬಂಧ AEBAS ನಿಂದ ಪಡೆದ Attendance Report ನಲ್ಲಿ **"ಪ್ರತಿ ಮಾಹೆಯ ವೇತನವನ್ನು ಬಯೋಮೆಟ್ರಿಕ್ ಹಾಜರಾತಿ ಆಧಾರದ ಮೇರೆಗೆ ಡ್ರಾ ಮಾಡಲಾಗಿದೆ"** ಎಂದು ಪ್ರಾಚಾರ್ಯರು ದೃಢೀಕರಿಸಿ ಶ್ರೀ ಪ್ರಕಾಶ ಹೆಚ್ ಟಿ, AEBAS Co-ordinator ರವರಿಗೆ **prakashsjep@gmail.com** ಮಿಂಚಂಚೆ ಮೂಲಕ ಪ್ರತಿ ತಿಂಗಳು ತಪ್ಪದೇ ಕಳುಹಿಸಿಕೊಡುವಂತೆ ತಿಳಿಸಲಾಗಿದೆ. ಸದರಿ ಮಾಹೆಯಲ್ಲಿ ಯಾವುದಾದರೂ ತಾಂತ್ರಿಕ ದೋಷಗಳಿದ್ದಲ್ಲಿ (server/network issues) ಸಂಬಂಧಿಸಿದ ವರದಿಯಲ್ಲಿ ನಮೂದಿಸಲು ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು 18/1/25

ಇವರಿಗೆ,
ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್/ ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕಾಗಿ.

ಪ್ರತಿ:
ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಚುರಪಡಿಸಲು.